ಹತ್ತಿರ ಹೋಗ್ತೀವಿ' ಎಂದು ಬಡವರಾದವರು ಹೇಳುತ್ತಿದ್ದರು. ಇವರಿಗೆ ಮುಖ್ಯವಾದದ್ದು ಬೆಲೆ ಕಡಿಮೆಯಾಗಬೇಕು. ಯಾರಾದರಾಗಲಿ, ಕಡಿಮೆ ಬೆಲೆ ಇರಬೇಕು – ಆದರೆ ಕಪ್ಪು ವ್ಯಾಪಾರಿಗಳು ಒಗ್ಗಟ್ಟಾಗಿ ಕಡಿಮೆ ಬೆಲೆ ಇಟ್ಟರೆ ಅಲ್ಲಿಗೆ ಹೋಗುತ್ತೇವೆ ಎನ್ನುವ ಮಾತುಗಳಲ್ಲಿ ಒಗ್ಗಟ್ಟು ಎಂಬ ಪದವನ್ನು ಗಮನಿಸಬೇಕು. ಕಾದಂಬರಿಯ ಈ ಆರಂಭವು ಬಿಳಿಯರು – ಭಾರತೀಯರ, ಆಫ್ರಿಕಾದ ಬಡವರು, ಭೂಮಿ ಕಳೆದುಕೊಂಡ ಆಫ್ರಿಕನ್ನರ ಸ್ಥಿತಿಗತಿಗಳನ್ನು ಬಿಳಿಯರು ಅವರನ್ನು ಪ್ರತ್ಯೇಕವಾಗಿ ಇಟ್ಟಿರುವುದನ್ನು ತಮ್ಮದೇ ದೇಶದಲ್ಲಿ ತಾವು ನಿರ್ಗತಿಕರಾಗಿ ಅನಾಥರಾಗಿ ಬದುಕಬೇಕಾದ ಸ್ಥಿತಿಯನ್ನು ವರ್ಣಿಸುತ್ತದೆ.

ಈ ಕಾದಂಬರಿಯಲ್ಲಿ 'ನುಗೊತೊ' ಎಂಬ ಪಾತ್ರದ ಕುಟುಂಬವೇ ಪ್ರಧಾನ. ನುಗೊತೊನಿಗೆ ಇಬ್ಬರು ಹೆಂಡತಿಯರು. ಒಬ್ಬಳು ನಜೇರಿ ಇನ್ನೊಬ್ಬಳು ನೋಕಬಿ. ನಜೇರಿಗೆ ಬೋರೋ, ಕೋರಿ ಮತ್ತು ಕಮಾವು ಎಂಬ ಮಕ್ಕಳಿದ್ದರೆ ನೋಕಬಿಗೆ ನುಜರೋಗೆ ಮತ್ತು ಮವಾಂಗಿ ಎಂಬ ಮಕ್ಕಳು. ಇವರಲ್ಲಿ ಮವಾಂಗಿ ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷರ ಪರವಾಗಿ ಹೋರಾಡಿ ಸತ್ತಿದ್ದ. ಉಳಿದವರು ಒಂದೇ ತಾಯಿಯ ಮಕ್ಕಳೆಂಬಂತೆ ಇದ್ದರು. ಎಲ್ಲರಿಗೂ 'ನುಜರೋಗೆ' ಓದಿ ಕಳೆದುಕೊಂಡಿರುವ ಭೂಮಿಯನ್ನು ಮರಳಿ ದೊರಕಿಸಿಕೊಡುವವನಾಗಬೇಕು ಎಂಬ ಮಹದಾಸೆ ಇತ್ತು. ಅದಕ್ಕಾಗಿ ಅವರು ದುಡಿದು ನುಜರೋಗೆಗೆ ಹಣ ಕೊಡಲು ಸಿದ್ಧರಾಗಿದ್ದರು. ಮಿಸ್ಟರ್ ಹೌಲೆಂಡ್ಸ್ ಎಂಬ ಬಿಳಿಯ ಅಧಿಕಾರಿಯ ವಶದಲ್ಲಿ ನುಗತೋ ಕುಟುಂಬದ ಜಮೀನು ಇದ್ದು ಅದರಲ್ಲಿಯೇ ಕೂಲಿ ಕಾರ್ಮಿಕನಾಗಿ ದುಡಿಯುತ್ತಿರುತ್ತಾನೆ, ಹೇಗಾದರೂ ಮಾಡಿ ಆ ಜಮೀನನ್ನು ಮರಳಿ ಪಡೆಯಬೇಕೆಂಬ ಹಂಬಲವಿರುತ್ತದೆ. ಆದ್ದರಿಂದ, ಅವನು ಮತ್ತು ಅವನ ಮಕ್ಕಳು ಮೌಮೌ ಚಳವಳಿಯನ್ನು ಬೆಂಬಲಿಸುತ್ತಾರೆ, ಹೋರಾಟಕ್ಕಿಳಿಯುತ್ತಾರೆ. ಮಿಸ್ಟರ್ ಹೌಲೆಂಡ್ಸ್ ಈ ದಂಗೆಯನ್ನು ಹತ್ತಿಕ್ಕಲು ಜೇಕೋಬೊ ಎಂಬ ಕಪ್ಪು ಮನುಷ್ಯನ ನೆರವನ್ನು ಪಡೆಯುತ್ತಾನೆ. ಈ ಜೇಕೋಬೋ ಕಪ್ಪು ಜನರ ಹೋರಾಟ, ಅದರ ಮುಂಚೂಣಿಯಲ್ಲಿರುವವರ ರಹಸ್ಯಗಳನ್ನೆಲ್ಲಾ ಹೌಲೆಂಡ್ಸ್‌ಗೆ ತಿಳಿಸಿ ಬಂಧನ ಮತ್ತು ಕೊಲೆಗಳನ್ನು ಮಾಡಿಸುತ್ತಿರುತ್ತಾನೆ. ನುಜರೋಗೆ ಜೇಕೋಬನ ಮಗಳು ಮಿಯಾಕಿಯಾ ಸ್ನೇಹಿತಳಾಗುತ್ತಾಳೆ. ಅವಳೂ ಸಹ ತನ್ನ ತಂದೆಯ ಎದುರಿಗೆ ಅಸಹಾಯಕಳೇ ಆಗಿರುತ್ತಾಳೆ. ನುಜರೋಗೆ ತನ್ನ ತಂದೆಯ ಹೋರಾಟಕ್ಕೆ ಬೆಂಬಲವನ್ನೇನೂ ಕೊಡುವುದಿಲ್ಲ. ತನ್ನ ಪಾಡಿಗೆ ತಾನು ಬೇರೊಂದು ಊರಿನಲ್ಲಿ ಓದನ್ನು ಮುಂದುವರಿಸುತ್ತಾನೆ. ತನ್ನ ತಂದೆ ಮತ್ತು ಸಹೋದರರು ಹೋರಾಟದಲ್ಲಿ ತೊಡಗಿದ್ದರಿಂದ ಇವನೂ ಸಹ ಪೊಲೀಸರಿಂದ ಹೊಡೆತ ಅನುಭವಿಸಬೇಕಾಗುತ್ತದೆ. ಊರಿಗೆ ಬರುತ್ತಾನೆ. ಪೊಲೀಸರ ಹೊಡೆತದಿಂದ ಸಹೋದರರು ಮತ್ತು ತಂದೆ ಸಾಯುವ ಹಂತ ತಲುಪುತ್ತಾರೆ. ಕೊನೆಗೆ ಭಾರತೀಯರ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರುತ್ತಾನೆ. ಅಲ್ಲಿಯೂ ಸಹ ಉಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ತಂದೆ ಸಹೋದರರನ್ನು ಕಳೆದುಕೊಳ್ಳುತ್ತಾನೆ, ಹೌಲೆಂಡ್ಸ್ ಮತ್ತು ಜೇಕೋಬ ನುಜರೋಗೆಯ ಸಹೋದರನಿಂದಲೇ ಕೊಲೆಯಾಗುತ್ತಾರೆ. ನುಜರೋಗೆ ಸಹ ಏನೂ ಮಾಡದ ಅಸಹಾಯಕ ಸ್ಥಿತಿ ತಲುಪುತ್ತಾನೆ. ಶಿಕ್ಷಣ ಪಡೆದು ಭೂಮಿಯನ್ನು ಮರಳಿ ಪಡೆಯಬೇಕೆಂಬ ತಂದೆ ಸಹೋದರರ ಆಸೆಯನ್ನಾಗಲಿ, ಹೊಸ ದಿನಕ್ಕಾಗಿ ಕಾಯೋಣ ಎಂಬ ತನ್ನ ಸ್ನೇಹಿತೆ ಮಿವಾಕಿಯ ಮಾತನ್ನಾಗಲಿ ಅವನಿಂದ ನೆರವೇರಿಸಲು ಸಾಧ್ಯವಾಗುವುದಿಲ್ಲ. ಚಿಕ್ಕ ವಯಸ್ಸಿನಲ್ಲಿ ಅವನು ಜವಾಬ್ದಾರಿ ಹೊರಲು ಸಿದ್ಧವಾಗಿದ್ದ. ಆದರೆ, ಅದರಿಂದ ವಿಮುಖವಾಗುವಂತೆ ಪರಿಸ್ಥಿತಿ ಮಾಡಿತ್ತು. ಪಾಪಪ್ರಜ್ಞೆ ಆವರಿಸಿತು. ಕಾದಂಬರಿಯ ಕೊನೆಯ ಸಾಲುಗಳು ಕಾದಂಬರಿಯ ಧ್ವನಿಯನ್ನು ಹಿಡಿದಿಡುತ್ತವೆ.

ನುಜರೋಗೆ ಶಿಕ್ಷಣ ಮುಖ್ಯ, ಅದನ್ನು ಸಾಧಿಸಲು ಹರಸಾಹಸಪಟ್ಟ. ಬಿಳಿಯನ ಮಗ